ಈ) ಸರ್ಕಾರವು ಹೊಸದಾಗಿ ಗಣಿ ಕೈಗಾರಿಕೆಗಳನ್ನು ತೆರೆಯಲು ಅನುಮತಿ ನೀಡಲು ಕ್ರಮ ಕೈಗೊಂಡಿದೆಯೇ ಹಾಗಿದ್ದ ಪಕ್ಷದಲ್ಲಿ ಯಾವ ರೀತಿಯ ಕ್ರಮ ಕೈಗೊಂಡಿದ್ದೀರಿ

ಉ) ಕಳೆದ ಎರಡು ವರ್ಷಗಳಿಂದ ಗಣಿ ಕೈಗಾರಿಕೆಗಳಿಂದ ಬಂದಿರುವ ಆದಾಯವೆಷ್ಟು ನಷ್ಟವಾಗಿದ್ದ ಪಕ್ಷದಲ್ಲಿ ನಷ್ಟವೆಷ್ಟು?

ಶ್ರೀ ಎ ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಿಂದ ನಾಲ್ಕು ಅನಧಿಕೃತ ಗಣಿಗಾರಿಕೆಯನ್ನು ಪತ್ತೆ ಹಚ್ಚಿದ್ದು, ಈ ಪೈಕಿ 1 ಗ್ರಾನೈಟ್ ಗಣಿಗಾರಿಕೆ ಮತ್ತು 3 ಮರಳು ನಿಕ್ಷೇಪಕ್ಕೆ ಸಂಬಂಧಿಸಿದೆ ಅನಧಿಕೃತವಾಗಿ ತೆಗೆಯಲಾದ ಗ್ರಾನೈಟ್ ಶಿಲಾ ದಿಮ್ಮಿಗಳನ್ನು ವಶಪಡಿಸಿಕೊಂಡು ಕಾನೂನಿನ ರೀತಿ ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿದೆ ಹಾಗೂ ಅನಧಿಕೃತ ಗಣಿಗಾರಿಕೆಗೆ ಬಳಸಲಾದ ಮರಳು ನಿಕ್ಷೇಪವನ್ನು ಹರಾಜು ಮಾಡಲಾಗಿದೆ

ಆ) ಖಾಸಗಿ ಭೂಮಿಯಲ್ಲಿ 63 ಗಣಿ ಕೈಗಾರಿಕೆಗಳು ಪ್ರಾರಂಭವಾಗಿದ್ದು ವಿವರ ಈ ಕೆಳಗಿನಂತಿದೆ –

ಕಪ್ಪು ಗ್ರಾನೈಟ್	–54
ಕಟ್ಟಡದ ಕಲ್ಲು	–06
ಸಾಮಾನ್ಯ ಮರಳು	–02
ಸುಣ್ಣದ ಕಲ್ಲು	–01

ಇ) ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಕಂದಾಯ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟಲು ಕ್ರಮ ತೆಗೆದುಕೊಂಡಿದೆ ಹಾಗೂ ಅನಧಿಕೃತ ಗಣಿಗಾರಿಕೆಯಿಂದ ತೆಗೆದಿದ್ದ ಶಿಲಾ ದಿಮ್ಮಿಗಳನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಮಾಡಲಾಗಿದೆ ಅಕ್ರಮ ಮರಳು ಗಣಿಗಾರಿಕೆಯನ್ನು ತಡೆಗಟ್ಟಲು ಎಲ್ಲಾ ಕ್ರಮ ಕೈಗೊಂಡು ಅದನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿದೆಯಾದ್ದರಿಂದ, ಸರ್ಕಾರದ ಬೊಕ್ಕಸಕ್ಕೆ ಆದಾಯ ಹೆಚ್ಚಾಗಿದ್ದು, ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಹೌದು

ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ, 1994 ರ ಅನುಸಾರ ಗಣಿಗಾರಿಕೆಗೆ ಅನುಮತಿ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ

ಉ) 2001–02ನೇ ಸಾಲಿನಲ್ಲಿ ರೂ 3,28,82,911 ಹಾಗೂ 2002–03ನೇ ಸಾಲಿನಲ್ಲಿ ರೂ 4,13,93,483 ರಾಜಧನ ವಸೂಲಾಗಿದ್ದು, ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ರೇಷ್ಮೆ ಮಾರಾಟ

231 (573) ಶ್ರೀ ಎ ಎಸ್ ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಿಂದ ಕರ್ನಾಟಕ ರೇಷ್ಮೆ ವಿನಿಮಯದಲ್ಲಿ ಯಾವ ಪ್ರಮಾಣದಲ್ಲಿ ವ್ಯವಹಾರವು ನಡೆದಿರುತ್ತದೆ

ಆ) ವಿದೇಶಿ ವಿನಿಮಯದಲ್ಲಿ ಕರ್ನಾಟಕ ರೇಷ್ಮೆ ಯಾವ ಸ್ಥಾನದಲ್ಲಿದೆ

ಇ) ಉತ್ತಮವಾದ ರೇಷ್ಮೆಗೆ ಮಾರುಕಟ್ಟೆಯಲ್ಲಿ ಸ್ಥಾನ ಸಿಕ್ಕಿದೆಯೇ ಸಿಗದಿರಲು ಕಾರಣವೇನು

ಈ) ರೇಷ್ಮೆಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗುತ್ತದೆಯೇ ಸಿಗದಿದ್ದ ಪಕ್ಷದಲ್ಲಿ ಕಾರಣವೇನು

ಉ) ಕರ್ನಾಟಕದ ರೇಷ್ಮೆಗೆ ವಿದೇಶದಲ್ಲಿ ಬೇಡಿಕೆ ಇದೆಯೇ ಯಾವ ಪ್ರಮಾಣದಲ್ಲಿ ಬೇಡಿಕೆ ಇಲ್ಲದಿದ್ದರೆ ಕಾರಣವೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಆ ಸಂಬಂಧದ ವಿವರ ಕೆಳಕಂಡಂತಿದೆ

ವರ್ಷ	ರೇಷ್ಮೆಯ ಪ್ರಮಾಣ (ಮೆ ಟನ್)	ರೇಷ್ಮೆಯ ಮೌಲ್ಯ (ರೂ ಲಕ್ಷಗಳಲ್ಲಿ)
2001–02	1674	17759
2002–03	1604	12912

ಆ) 2002–03ನೇ ಸಾಲಿನಲ್ಲಿ ರೇಷ್ಮೆಯಿಂದ ರಾಷ್ಟ್ರದ ವಾರ್ಷಿಕ ವಿದೇಶಿ ವಿನಿಮಯ ಗಳಿಕೆ ರೂ 2294 ಕೋಟಿ ಆಗಿದ್ದು ಅದರಲ್ಲಿ ರಾಜ್ಯದಿಂದ ರಫ್ತಾಗಿರುವ ಉತ್ಪನ್ನಗಳ ಮೌಲ್ಯ ರೂ 746 ಕೋಟಿಗಳಷ್ಟಿದೆ

ಇ) ಸಿಕ್ಕಿದೆ

ಈ) ಸಿಗುತ್ತಿದೆ

ಉ) ರಾಷ್ಟ್ರದಲ್ಲಿ ಉತ್ಪಾದನೆಯಾಗುತ್ತಿರುವ ಕಚ್ಚಾ ರೇಷ್ಮೆಯ ಗುಣಮಟ್ಟ ಕಡಿಮೆ ಇರುವುದರಿಂದ ಅದಕ್ಕೆ ವಿದೇಶದಲ್ಲಿ ಬೇಡಿಕೆ ಇರುವುದಿಲ್ಲ ಆದರೆ, ಬಟ್ಟೆ ಮತ್ತು ರೇಷ್ಮೆಯ ಇತರೆ ವಸ್ತುಗಳಿಗೆ ಬೇಡಿಕೆ ಇದೆ ಭಾರತದಿಂದ ಪ್ರತಿ ವರ್ಷ ಸುಮಾರು ರೂ 2294 ಕೋಟಿಗಳಷ್ಟು ಬಟ್ಟೆ ಮತ್ತು ಇತರೆ ಉತ್ಪನ್ನಗಳು ಹೊರದೇಶಗಳಿಗೆ ರಫ್ತಾಗುತ್ತದೆ ರಾಷ್ಟ್ರದಲ್ಲಿನ ರೇಷ್ಮೆ ಉತ್ಪಾದನೆಯಲ್ಲಿ ರಾಜ್ಯದ ಪಾಲು ಶೇಕಡಾ 57ರಷ್ಟಿದ್ದು ದೇಶದ ರೇಷ್ಮೆ ಬಟ್ಟೆ ಉತ್ಪಾದನೆಯಲ್ಲಿ ಕೆಯಾಗುತ್ತಿದೆ

ಕೈಮಗ್ಗ ನೇಕಾರರಿಗಾಗಿ ಕೇಂದ್ರ ಸರ್ಕಾರದ ವಿಶೇಷ ಯೋಜನೆ

232 (559) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೈಮಗ್ಗ ನೇಕಾರರಿಗೆ ಕೆಂದ್ರ ಸರ್ಕಾರ ಯಾವುದಾದರೂ ವಿಶೇಷ ಯೋಜನೆಯನ್ನು ರೂಪಿಸಿದೆಯೆ ಹಾಗಿದ್ದಲ್ಲಿ ಅದರ ವಿವರ ನೀಡುವುದೆ

ಆ) ಕೇಂದ್ರ ಸರ್ಕಾರ ಹತ್ಖರ್ಗಾ ಪ್ರೋತ್ಸಾಹ ಯೋಜನೆಯಡಿ ರಾಜ್ಯ ಸರ್ಕರಕ್ಕೆ ಎಷ್ಟು ಹಣ ನೀಡಿದೆ